**All India Radio: Bangalore**
**National Bulletin In Kannada**
**11.07.2026  1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**11.07.2026  1.10 p.m.**

**<><><><>**

ಮುಖ್ಯಾಂಶಗಳು

1. ಭಾರತ - ನ್ಯೂಜಿಲೆಂಡ್ ನಡುವಿನ ದ್ವಿಪಕ್ಷೀಯ ಸಂಬಂಧ, ಕಾರ್ಯತಂತ್ರ ಪಾಲುದಾರಿಕೆಗೆ ಎತ್ತರಿಸಲು ಪ್ರಧಾನಿ ನರೇಂದ್ರ ಮೋದಿ - ನ್ಯೂಜಿಲೆಂಡ್ ಪ್ರಧಾನಿ ನಿರ್ಧಾರ
2. ಸ್ವದೇಶಿ ನಿರ್ಮಿತ ಗುಪ್ತ ಯುದ್ಧ ನೌಕೆ ಐಎನ್‌ಎಸ್ ಮಹೇಂದ್ರಗಿರಿ ಇಂದು ನೌಕಾಪಡೆಗೆ ಸೇರ್ಪಡೆ
3. ಇಂದು ವಿಶ್ವ ಜನಸಂಖ್ಯಾ ದಿನ; ಯುವಜನರ ನಿರೀಕ್ಷೆ - ಆಕಾಂಕ್ಷೆ ಅರಿತುಕೊಳ್ಳುವುದು ಈ ವರ್ಷದ ಘೋಷ ವಾಕ್ಯ
4. ಫಿಫಾ ವಿಶ್ವಕಪ್; ಮೂರನೇ ಕ್ವಾರ್ಟರ್‌ಫೈನಲ್‌ನಲ್ಲಿಂದು ನಾರ್ವೆ -ಇಂಗ್ಲೆಂಡ್ ಸೆಣಸು

<><><><>

ಪ್ರಧಾನಿ ನರೇಂದ್ರ ಮೋದಿ ಮತ್ತು ನ್ಯೂಜಿಲೆಂಡ್‌ನ ಪ್ರಧಾನಮಂತ್ರಿ ಕ್ರಿಸ್ಟೋಫರ್ ಲಕ್ಸನ್ ನಡುವೆ ಆಕ್ಲೆಂಡ್‌ನಲ್ಲಿ ನಡೆದ ಮಾತುಕತೆ ನಂತರ, ಭಾರತ ಮತ್ತು ನ್ಯೂಜಿಲೆಂಡ್ ಇಂದು ದ್ವಿಪಕ್ಷೀಯ ಸಂಬಂಧಗಳನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಿವೆ.  ಅಲ್ಲದೆ, ೨೦೩೦ರ ವೇಳೆಗೆ ಸರಕು ಮತ್ತು ಸೇವೆಗಳಲ್ಲಿ ವಾರ್ಷಿಕ ದ್ವಿಪಕ್ಷೀಯ ವಾಣಿಜ್ಯ ವಹಿವಾಟು ೩೫ ಸಾವಿರ ಕೋಟಿ ರೂಪಾಯಿಗಳಿಗೆ ದ್ವಿಗುಣಗೊಳಿಸುವ ಗುರಿ ಹೊಂದಿವೆ. ಮಹತ್ವದ ಈ ಸಭೆಯು ಅನೇಕ ನಿರ್ದಿಷ್ಟ ಫಲಿತಾಂಶಗಳನ್ನು ನೀಡಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ಬಾಂಧವ್ಯವನ್ನು ವಿಸ್ತರಿಸುವ ಮಾರ್ಗಸೂಚಿ, ಇಂಡೋ-ಪೆಸಿಫಿಕ್ ಕಡಲ ಸಹಕಾರ ಹೆಚ್ಚಿಸುವ ಚೌಕಟ್ಟು ಮತ್ತು ಭಾರತೀಯ ನೌಕಾಪಡೆ ಹಾಗೂ ನ್ಯೂಜಿಲೆಂಡ್ ರಕ್ಷಣಾ ಪಡೆಗಳ ನಡುವಿನ ಪರಸ್ಪರ ಲಾಜಿಸ್ಟಿಕ್ಸ್ ಬೆಂಬಲ ಒಪ್ಪಂದವು ಇವುಗಳಲ್ಲಿ ಪ್ರಮುಖವಾಗಿದೆ. ಮಾತುಕತೆ ನಂತರ ಜಂಟಿ ಹೇಳಿಕೆಯಲ್ಲಿ ಉಭಯ ನಾಯಕರು, ಇಂಡೋ-ಪೆಸಿಫಿಕ್ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದು, ಮುಕ್ತ ಮತ್ತು ಸಮೃದ್ಧ ಪ್ರದೇಶಕ್ಕಾಗಿ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಸಾರ್ವಭೌಮತ್ವ,

ಪ್ರಾದೇಶಿಕ ಸಮಗ್ರತೆ ಮತ್ತು ನಿಯಮ-ಆಧಾರಿತ ಅಂತಾರಾಷ್ಟ್ರೀಯ ಅನುಸರಣೆಯನ್ನು ಕಾಪಾಡುವ ಮಹತ್ವವನ್ನು ಪ್ರತಿಪಾದಿಸಿದರು. ಅಂತಾರಾಷ್ಟ್ರೀಯ ಕಾನೂನಿಗೆ ಅನುಸಾರ ನೌಕಾಯಾನ ಮತ್ತು ಕಡಲ ಮೇಲಿನ ಹಾರಾಟ ಸ್ವಾತಂತ್ರ್ಯ ಹಾಗೂ ಸಮುದ್ರಗಳ ಇತರ ಕಾನೂನುಬದ್ಧ ಬಳಕೆಗೆ ಉಭಯ ನಾಯಕರು ಕರೆ ನೀಡಿದ್ದಾರೆ. ಅಲ್ಲದೆ, ಇಂಡೋ-ಪೆಸಿಫಿಕ್‌ನಲ್ಲಿ ಸಹಕಾರ ಹೆಚ್ಚಿಸುವ ನಿಟ್ಟಿನಲ್ಲಿ, ಸಮನ್ವಯ ಮತ್ತು ಮಾಹಿತಿ ವಿನಿಮಯವನ್ನು ಬಲಪಡಿಸಲು ಒಪ್ಪಿಗೆ ಸೂಚಿಸಿದ್ದಾರೆ. ಸಮತೋಲಿತ, ಸಮಗ್ರ ಹಾಗೂ ಪರಸ್ಪರ ಪ್ರಯೋಜನಕಾರಿ ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದದ ಅಂಗೀಕಾರವನ್ನು ಉಭಯ ನಾಯಕರು ಸ್ವಾಗತಿಸಿದ್ದಾರೆ. ಒಪ್ಪಂದದ ಆರಂಭಿಕ ಜಾರಿ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಒಟ್ಟಾಗಿ ಕಾರ್ಯನಿರ್ವಹಿಸಲು ಅವರು ಒಪ್ಪಿಕೊಂಡಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಪುನರಾವರ್ತನೆಗೊಳ್ಳುತ್ತಿರುವ ಉದ್ವಿಗ್ನತೆ ಕುರಿತು ಕಳವಳ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಕ್ರಿಸ್ಟೋಫರ್ ಲಕ್ಸನ್, ಸಂಯಮ ಕಾಪಾಡಿಕೊಂಡು ನಾಗರಿಕರ ರಕ್ಷಣೆಯನ್ನು ಖಾತರಿಪಡಿಸಿಕೊಳ್ಳುವಂತೆ ಕರೆ ನೀಡಿದ್ದಾರೆ. ಹಡಗು ಸಾಗಣೆಯ ಮೇಲಿನ ಯಾವುದೇ ನಿರ್ಬಂಧಗಳನ್ನು ವಿರೋಧಿಸಿದ ಉಭಯ ನಾಯಕರು, ಹಡಗು ಸಂಚಾರಕ್ಕೆ ಸ್ವಾತಂತ್ರ್ಯ ಮತ್ತು ಹೊರ್ಮುಜ್ ಜಲಸಂಧಿಯ ಮೂಲಕ ಜಾಗತಿಕ ವಾಣಿಜ್ಯ ಹರಿವನ್ನು ಸಂಪೂರ್ಣವಾಗಿ ಪುನರ್ ಸ್ಥಾಪಿಸಲು ಕರೆ ನೀಡಿದ್ದಾರೆ. ಅಲ್ಲದೆ, ವಿಶ್ವಸಂಸ್ಥೆಯ ಪರಿಣಾಮಕಾರಿ ಸುಧಾರಣೆ. ಮತ್ತು ಭದ್ರತಾ ಮಂಡಳಿಯ ವಿಸ್ತರಣೆಗೆ ತಮ್ಮ ಬೆಂಬಲವನ್ನು ದೃಢಪಡಿಸಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ಮತ್ತು ನ್ಯೂಜಿಲೆಂಡ್ ಪ್ರಧಾನಿಯವರು ಆಕ್ಲೆಂಡ್‌ನಲ್ಲಿಂದು ನಡೆದ ಭಾರತ-ನ್ಯೂಜಿಲೆಂಡ್ ವಾಣಿಜ್ಯ ಮಾತುಕತೆ- ೨೦೨೬ರಲ್ಲಿ ಭಾಗವಹಿಸಿ, ಉಭಯ ದೇಶಗಳ ನಡುವಿನ ಆರ್ಥಿಕ ಸಂಬಂಧಗಳನ್ನು ಬಲಪಡಿಸುವ ಬದ್ಧತೆಯನ್ನು ಪುನರುಚ್ಚರಿಸಿದರು. ವಾಣಿಜ್ಯೋದ್ಯಮಿಗಳನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ದಾಖಲೆಯ ಒಂಬತ್ತು ತಿಂಗಳಲ್ಲಿ ಮುಕ್ತಾಯಗೊಂಡಿದೆ, ಇದು ದ್ವಿಪಕ್ಷೀಯ ಸಂಬಂಧದಲ್ಲಿನ ಬಲವಾದ ವಿಶ್ವಾಸ ಮತ್ತು ವೇಗವನ್ನು

ಪ್ರತಿಬಿಂಬಿಸುತ್ತದೆ. ೨೦೩೦ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರವು ದ್ವಿಗುಣಗೊಳ್ಳುವ ನಿರೀಕ್ಷೆಯಿದೆ. ಮುಂದಿನ ೧೫ ವರ್ಷಗಳಲ್ಲಿ ಭಾರತದಲ್ಲಿ ೨೦ ಶತಕೋಟಿ ಡಾಲರ್ ಹೂಡಿಕೆ ಮಾಡುವ ನ್ಯೂಜಿಲೆಂಡ್‌ನ ಬದ್ಧತೆ ಸ್ವಾಗತಾರ್ಹ. ಹೆಚ್ಚಳವಾಗುತ್ತಿರುವ ಆರ್ಥಿಕ ಪಾಲುದಾರಿಕೆಯಲ್ಲಿ ಇದೊಂದು ಪ್ರಮುಖ ಮೈಲಿಗಲ್ಲು ಎಂದು ಬಣ್ಣಿಸಿದರು. ಭಾರತವನ್ನು ಅವಕಾಶಗಳ ನೆಲ ಎಂದ ಪ್ರಧಾನಿ ಅವರು, 'ಭಾರತ ಕೇವಲ ಮಾರುಕಟ್ಟೆಯಲ್ಲ, ಜಾಗತಿಕ ಬೆಳವಣಿಗೆಗೆ ಒಂದು ಪ್ರಮುಖ ವೇದಿಕೆಯಾಗಿದೆ. ನೀತಿ ಸುಧಾರಣೆಗಳು, ಉತ್ಪಾದನಾ ಪ್ರೋತ್ಸಾಹ, ವಿಶ್ವ ದರ್ಜೆಯ ಮೂಲಸೌಕರ್ಯ ಮತ್ತು ಸುಧಾರಿತ ಸಂಪರ್ಕವು ಭಾರತವನ್ನು ಜಾಗತಿಕ ಹೂಡಿಕೆಗೆ ಆಕರ್ಷಕ ತಾಣವನ್ನಾಗಿ ಮಾಡಿದೆ. ೩೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ಉದ್ಯಮಿಗಳನ್ನು ಒಳಗೊಂಡ ವ್ಯಾಪಾರ ನಿಯೋಗಗಳು ದೀರ್ಘಾವಧಿಯ ಪಾಲುದಾರಿಕೆಗಾಗಿ ನಿಯಮಿತವಾಗಿ ಪರಸ್ಪರ ದೇಶಗಳಿಗೆ ಭೇಟಿ ನೀಡಬೇಕು. ಯುವ ಆವಿಷ್ಕಾರರು ಮತ್ತು ಉದ್ಯಮಿಗಳು ಭಾರತ-ನ್ಯೂಜಿಲೆಂಡ್ ಆರ್ಥಿಕ ಸಹಕಾರದ ಭವಿಷ್ಯವನ್ನು ರೂಪಿಸುತ್ತಾರೆ ಎಂದು ಹೇಳಿದರು. ಪ್ರಧಾನಿಯವರು ಆಕ್ಲೆಂಡ್‌ನಲ್ಲಿಂದು ಅಲ್ಲಿನ ಭಾರತೀಯರ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

<><><><>

ಸಾಂಪ್ರದಾಯಿಕ ರಕ್ಷಣಾ ಸಾಮರ್ಥ್ಯ ಮತ್ತು ಸುಧಾರಿತ ತಂತ್ರಜ್ಞಾನ ಎರಡನ್ನೂ ಬಲಪಡಿಸುವ ಮೂಲಕ ಭಾರತ, ಬಲಿಷ್ಠ, ಸ್ವಾವಲಂಬಿ ಹಾಗೂ ಭವಿಷ್ಯಕ್ಕೆ ಸಜ್ಜುಗೊಂಡ ರಕ್ಷಣಾ ಪಡೆಯನ್ನು ನಿರ್ಮಿಸುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ವಿಶಾಖಪಟ್ಟಣದಲ್ಲಿಂದು ಪ್ರಾಜೆಕ್ಟ್ ೧೭ಎ ಸರಣಿಯ ಆರನೇ ಸ್ವದೇಶಿ ಗುಪ್ತ ಯುದ್ಧನೌಕೆ 'ಐಎನ್‌ಎಸ್ ಮಹೇಂದ್ರಗಿರಿ'ಯನ್ನು ಪೂರ್ವ ನೌಕಾಪಡೆಗೆ ಸೇರ್ಪಡೆಗೊಳಿಸಿ ಮಾತನಾಡಿದ ಅವರು, ಈ ನೌಕೆಯ ಸೇರ್ಪಡೆಯು, ದೇಶದ ಕಡಲ ಶಕ್ತಿ ಮತ್ತು ಸ್ವದೇಶಿ ರಕ್ಷಣಾ ಸಾಮರ್ಥ್ಯದ ಮತ್ತೊಂದು ಮೈಲಿಗಲ್ಲಾಗಿದೆ. ಕಳೆದ ಒಂದೂವರೆ ವರ್ಷಗಳಲ್ಲಿ ಆರು ಮುಂಚೂಣಿ ಯುದ್ಧನೌಕೆಗಳನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿರುವುದು ದೇಶದ ವಿಸ್ತರಿಸುತ್ತಿರುವ ಹಡಗು ನಿರ್ಮಾಣ ಸಾಮರ್ಥ್ಯ ಮತ್ತು ರಕ್ಷಣಾ ಆಮದುಗಳ ಮೇಲಿನ ಅವಲಂಬನೆಯಿಂದ ಮುಕ್ತಿ ಪಡೆದಿರುವುದಕ್ಕೆ ನಿದರ್ಶನವಾಗಿದೆ ಎಂದು ಹೇಳಿದರು. 'ಆತ್ಮನಿರ್ಭರ ಭಾರತ' ಉಪಕ್ರಮದಡಿ ಶೇಕಡ ೭೫ಕ್ಕಿಂತ ಹೆಚ್ಚು ಸ್ವದೇಶಿ ಸಾಮಗ್ರಿಗಳಿಂದ ನಿರ್ಮಾಣವಾಗಿರುವ ಐಎನ್‌ಎಸ್ ಮಹೇಂದ್ರಗಿರಿಯು

ಬ್ರಹ್ಮೋಸ್ ಕ್ಷಿಪಣಿ, ಸುಧಾರಿತ ರಾಡಾರ್ ಸೇರಿದಂತೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದು, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಭಾರತದ ರಕ್ಷಣಾ ವ್ಯಾಪ್ತಿಯನ್ನು ಹೆಚ್ಚಿಸಲಿದೆ ಎಂದು ತಿಳಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ 'ಮಹಾಸಾಗರ್' ಪರಿಕಲ್ಪನೆ ಅಡಿಯಲ್ಲಿ ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಭಾರತ, ವಿಶ್ವಾಸಾರ್ಹ ಭದ್ರತಾ ಪಾಲುದಾರ ದೇಶವಾಗಿ ಹೊರಹೊಮ್ಮಿದೆ. ನೈಸರ್ಗಿಕ ವಿಕೋಪಗಳು ಹಾಗೂ ಇತ್ತೀಚಿನ ಪಶ್ಚಿಮ ಏಷ್ಯಾ ಸಂಘರ್ಷದ ವೇಳೆ ವಾಣಿಜ್ಯ ಹಡಗುಗಳ ಸುರಕ್ಷಿತ ಸಂಚಾರವನ್ನು ಖಚಿತಪಡಿಸುವಲ್ಲಿ ನೌಕಾಪಡೆಯ ಪಾತ್ರ ಮಹತ್ವದ್ದಾಗಿತ್ತು ಎಂದರು. 'ಮ್ಯಾರಿಟೈಮ್ ಇಂಡಿಯಾ ೨೦೩೦' ಅಡಿಯಲ್ಲಿ ಭಾರತ, ಜಾಗತಿಕ ಹಡಗು ನಿರ್ಮಾಣದ ಕೇಂದ್ರವಾಗಲಿದ್ದು, ದೇಶದ ಯುವಜನತೆ ಹಾಗೂ ನವೋದ್ಯಮಗಳು ಮುಂದಿನ ಪೀಳಿಗೆಯ ರಕ್ಷಣಾ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಸಚಿವ ರಾಜನಾಥ್ ಸಿಂಗ್ ಕರೆ ನೀಡಿದರು.

<><><>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಇಂದು ಬಿಹಾರದ ಗಯಾದಲ್ಲಿ ೧೮ನೇ ಬಿಹಾರ ವಿಧಾನಸಭೆಯ ಸದಸ್ಯರಿಗೆ ಆಯೋಜಿಸಿರುವ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮವನ್ನು ಬಿಹಾರ ಸಾರ್ವಜನಿಕ ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಆಯೋಜಿಸಿದೆ.

<><><>

ಇಂದು ವಿಶ್ವ ಜನಸಂಖ್ಯಾ ದಿನ. ಪ್ರತಿ ವರ್ಷ ಜುಲೈ ೧೧ರಂದು ಆಚರಿಸಲಾಗುವ ಈ ದಿನ, ಹೆಚ್ಚುತ್ತಿರುವ ಜನಸಂಖ್ಯೆಯಿಂದ ಉಂಟಾಗುವ ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಅಲ್ಲದೆ, ಜನಸಂಖ್ಯೆಗೆ ಸಂಬಂಧಿಸಿದ ಕಾಳಜಿಗಳನ್ನು ಪರಿಹರಿಸಲು ಮತ್ತು ಸುಸ್ಥಿರ ಭವಿಷ್ಯದತ್ತ ಕೆಲಸ ಮಾಡುವುದನ್ನು ನೆನಪಿಸುತ್ತದೆ. 'ಇಂದು ಮತ್ತು ಭವಿಷ್ಯಕ್ಕಾಗಿ ಯುವಜನರ ನಿರೀಕ್ಷೆ ಮತ್ತು ಆಕಾಂಕ್ಷೆಗಳನ್ನು ಅರಿತುಕೊಳ್ಳುವುದು' ಈ ವರ್ಷದ ವಿಶ್ವ ಜನಸಂಖ್ಯಾ ದಿನದ ಘೋಷವಾಕ್ಯವಾಗಿದೆ.

<><><>

ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ, ಮಹಾರಾಷ್ಟ್ರದ ನಾಗ್ಪುರದಲ್ಲಿಂದು ನಡೆದ ಮೂರನೇ ಬ್ರಿಕ್ಸ್ ಒಕ್ಕೂಟ ರಾಷ್ಟ್ರಗಳ ಸಾರಿಗೆ ಸಚಿವರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬಳಿಕ

ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ರಸ್ತೆ, ರೈಲು, ವಿಮಾನಯಾನ ಮತ್ತು ಜಲ ಮಾರ್ಗ ಸಾರಿಗೆಗೆ ಪರ್ಯಾಯ ಜೈವಿಕ ಇಂಧನಗಳು ಮತ್ತು ಮಾಲಿನ್ಯ ಮುಕ್ತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಪ್ರತಿನಿಧಿಗಳು ಒಪ್ಪಿದ್ದಾರೆ ಎಂದು ತಿಳಿಸಿದರು.

<><><>

ಇತ್ತೀಚಿನ ತಲಾ ಆದಾಯ ದತ್ತಾಂಶದ ವಿಶ್ಲೇಷಣೆಯಂತೆ, ಸಿಕ್ಕಿಂ ರಾಜ್ಯ ಮತ್ತೊಮ್ಮೆ ದೇಶದಲ್ಲೇ ಅತಿ ಹೆಚ್ಚು ತಲಾದಾಯ ಹೊಂದಿರುವ ಅತ್ಯಂತ ಶ್ರೀಮಂತ ರಾಜ್ಯವಾಗಿ ಹೊರಹೊಮ್ಮಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇಕಡ ೦.೦೫ರಷ್ಟಿದ್ದರೂ, ೨೦೨೪-೨೫ರ ಹಣಕಾಸು ವರ್ಷದಲ್ಲಿ ಸಿಕ್ಕಿಂ ರಾಜ್ಯದ ತಲಾ ಆದಾಯ ೬.೪೬ ಲಕ್ಷ ರೂಪಾಯಿಗಳಿಗಿಂತಲೂ ಅಧಿಕ ದಾಖಲಾಗಿದೆ. ಇದು ದೇಶದ ಸರಾಸರಿ ತಲಾ ಆದಾಯಕ್ಕಿಂತ ಸುಮಾರು ಮೂರು ಪಟ್ಟು ಹೆಚ್ಚಾಗಿದೆ. ಕಳೆದ ಕನಿಷ್ಠ ಒಂದು ದಶಕದಿಂದಲೂ ಸಿಕ್ಕಿಂ, ಈ ಸ್ಥಾನವನ್ನು ಕಾಯ್ದುಕೊಂಡು ಬಂದಿದ್ದು, ವೈಯಕ್ತಿಕ ಆದಾಯದ ಆಧಾರದ ಮೇಲೆ ಭಾರತದ ಅತ್ಯಂತ ಸಮೃದ್ಧ ರಾಜ್ಯ ಎಂಬ ತನ್ನ ಹೆಗ್ಗಳಿಕೆಗೆ ಪುನಃ ಪಾತ್ರವಾಗಿದೆ.

<><><>

ಇಂದು ರಾತ್ರಿ ಮಿಯಾಮಿ ಗಾರ್ಡನ್ಸ್‌ನಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯವಳಿಯ ಮೂರನೇ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಾರ್ವೆ ತಂಡ, ಇಂಗ್ಲೆಂಡ್‌ನ ಸವಾಲನ್ನು ಎದುರಿಸಲಿದ್ದು, ಪಂದ್ಯವು ಭಾರತೀಯ ಕಾಲಮಾನ ಇಂದು ಮಧ್ಯರಾತ್ರಿ ೨:೩೦ಕ್ಕೆ ಆರಂಭವಾಗಲಿದೆ. ನಾಳೆ ಕಾನ್ಸಾಸ್ ಸಿಟಿಯಲ್ಲಿ ನಡೆಯಲಿರುವ ನಾಲ್ಕನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡ ಸ್ವಿಟ್ಜರ್ಲೆಂಡ್ ತಂಡವನ್ನು ಎದುರಿಸಲಿದೆ. ಎರಡನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ಪೇನ್ ತಂಡವು ಬೆಲ್ಜಿಯಂ ವಿರುದ್ಧ ೨-೧ ಗೋಲುಗಳ ಅಂತರದಿಂದ ರೋಚಕ ಜಯ ಸಾಧಿಸಿ ಸೆಮಿಫೈನಲ್‌ಗೆ ಪ್ರವೇಶಿಸಿದೆ. ಭಾರತೀಯ ಕಾಲಮಾನ ಇದೇ ೧೪ರ ಮಧ್ಯರಾತ್ರಿ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಸ್ಪೇನ್, ಫ್ರಾನ್ಸ್ ತಂಡವನ್ನು ಎದುರಿಸಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>